ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 252/2022**

**ಫ್ರಾಸಾ-6 ಚಾಸಾ- 6**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಚಂದ್ರಣ್ಣ |
| ತಂದೆಯ ಹೆಸರುಃ | : | ಚಂದ್ರಶೇಖರ |
| ವಯಸ್ಸುಃ | : | 65 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಕಿತ್ತಗಳಲೆ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:11-06-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ಚಾಸಾ-1 ರಿಂದ 5ರವರ ಪರಿಚಯವಿಲ್ಲ. ಚಾಸಾ-7 ಮತ್ತು 8ರವರ ಪರಿಚಯವಿದೆ. ಆರೋಪಿ ಸತೀಶನ ಪರಿಚಯವಿಲ್ಲ. (ಆರೋಪಿ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆಗೆ ತಕರಾರಿಲ್ಲವೆಂದು ವಕೀಲರು ಹೇಳಿರುತ್ತಾರೆ.) ಸದರಿ ಆರೋಪಿ ಸತೀಶ ತಂದೆ ಶಿವಮಣಿ ಏನು ಕೆಲಸ ಮಾಡಿಸುತ್ತಾರೆ, ಯಾವ ಊರಿನವರು, ಅವರ ಕೈಕೆಳಗಡೆ ಯಾರು ಯಾರು ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಆನಂದ್ ಎಂಬುವವರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಮನೆಯ ಗಾರೆ ಕೆಲಸಕ್ಕೆ ಆರೋಪಿ ಬಂದಿದ್ದನೋ ಎಂಬುದು ನನಗೆ ಗೊತ್ತಿಲ್ಲ. ಹಾಗೆಯೇ ಅವನ ಜೊತೆ ಚಾಸಾ-1 ರಿಂದ 3ರವರು ಬಂದಿದ್ದರೋ ಎಂಬುದು ಗೊತ್ತಿಲ್ಲ. ಅವರು ಎಲ್ಲಿ ಮಲಗುತ್ತಿದ್ದರೆಂದು ಗೊತ್ತಿಲ್ಲ. ಚಾಸಾ-4ರವರ ಮನೆಯಲ್ಲಿ ಅವರು ಕೆಲಸ ಮಾಡುತ್ತಿದ್ದರೋ ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆನಂದ ಮದ್ಯಪಾನ ಮಾಡಿಕೊಂಡು ಗಲಾಟೆ ಮಾಡುತ್ತಿದ್ದ ವಿಚಾರ ನನಗೆ

ಗೊತ್ತಿಲ್ಲ. ಆರೋಪಿ ಆನಂದನಿಗೆ ಹಲ್ಲೆ ಮಾಡಿ ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿಃ9-6-2022ಕ್ಕಿಂತ ಸುಮಾರು 4 ತಿಂಗಳ ಹಿಂದೆ ಈ ಪ್ರಕರಣದ ಆರೋಪಿ ಸತೀಶ ಪರಿಚಯವಾದರು ನಾನು ಹೊಸದಾಗಿ ಮನೆ ಕಟ್ಟುತ್ತಿದ್ದ ಕಾರಣ ಆತನನ್ನು ನನ್ನ ಮನೆಯ ಟೈಲ್ಸ್ ಕೆಲಸ ಮಾಡಲು ಕೇಳಿಕೊಂಡಿದ್ದೆನು, ಅದರಂತೆ ಅವರು ಬೇರೆಲೇಬರ್ಸ್ ಗಳನ್ನು ಕರೆದುಕೊಂಡು ಬಂದು ನನ್ನ ಮನೆಕೆಲಸ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಚಾಸಾ-4ರವರ ಲೈನ್ಮನೆಯ ಕಾಂಪೌಂಡ್ಕೆಲಸ ಮತ್ತು ನನ್ನ ಮನೆ ಗಾರೆಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ತನ್ನ ಜೊತೆ ಚಾಸಾ-1 ರಿಂದ 3 ರವರನ್ನು ಮತ್ತು ಉತ್ತರಪ್ರದೇಶದ ಆನಂದ ಎಂಬುವವರನ್ನು ಚಾಸಾ-4ರವರ ಲೈನ್ಮನೆಯ ಫೌಂಡೇಷನ್ಕೆಲಸಕ್ಕೆ ಕರೆದುಕೊಂಡು ಬಂದಿದ್ದು ಅವರೆಲ್ಲರೂ ಅಲ್ಲಿಯೆ ಕೆಲಸ ಮಾಡಿಕೊಂಡು ಆ ಲೈನ್ಮನೆಯ ಒಂದು ಭಾಗದಲ್ಲಿ ಆರೋಪಿ ಮತ್ತು ಆನಂದ ಇನ್ನೊಂದು ಭಾಗದಲ್ಲಿ ಚಾಸಾ1 ರಿಂದ 3 ರವರು ಮಲಗುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿದಿನ ಆರೋಪಿ ಕೆಲಸ ಮುಗಿದ ನಂತರ ಮದ್ಯವನ್ನು ತೆಗೆದುಕೊಂಡು ಬರುತ್ತಿದ್ದನು ಎಲ್ಲರೂ ಮದ್ಯಪಾನ ಮಾಡುತ್ತಿದ್ದರು ಹಾಗೂ ಸತೀಶ ಮತ್ತು ಆನಂದ ಆಗಾಗ್ಗೆ ಮದ್ಯಪಾನ ಮಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ದಿಃ4-6-2022ರಂದು ಎಲ್ಲರೂ ಕೆಲಸ ಮುಗಿಸಿ ಸಂಜೆ 7 ಗಂಟೆಗೆ ಆರೋಪಿಯು ಮದ್ಯವನ್ನು ತೆಗೆದುಕೊಂಡು ಲೈನ್ಮನೆಗೆ ಬಂದನು,ಅವರು ಮತ್ತು ಮೃತ ಆನಂದ ಹಾಗೂ ಚಾಸಾ-1 ರಿಂದ 3 ರವರು ಮದ್ಯಪಾನ ಮಾಡಿ ಮಲಗಿದ ನಂತರ ಆನಂದ ಮತ್ತು ಆರೋಪಿ ಗಲಾಟೆ

ಮಾಡಿಕೊಳ್ಳುತ್ತಲೇ ಇದ್ದರು, ರಾತ್ರಿ 11 ಗಂಟೆಗೆ ಚಾಸಾ-1 ರಿಂದ 3ರವರು ಅವರಿಬ್ಬರಿಗೂ ಸುಮ್ಮನೆ ಇರುವಂತೆ ಹೇಳಿದರೂ ಸಹ ಆರೋಪಿಗೆ ಆನಂದ ಇನ್ನೂ ಮದ್ಯಪಾನ ಬೇಕು ತೆಗೆದುಕೊಂಡು ಬಾ ಎಂದು ಗಲಾಟೆ ಮಾಡುತ್ತಿದ್ದನು, ಆಗ ಸತೀಶನು ಈಗ ಕುಡಿದಿರುವುದೇ ಸಾಕು ಇನ್ನು ಯಾವ ಮದ್ಯ ಬೇಕು ಎಂದು ಅವನಿಗೆ ಬೈದನು ಮತ್ತು ನೀನು ಬದುಕಿದ್ದರೆ ತಾನೇ ಮದ್ಯ ಕೇಳುವುದು ಮತ್ತು ಅದನ್ನು ಕುಡಿದು ಗಲಾಟೆ ಮಾಡುವುದು ಎಂದು ಅಲ್ಲೇ ಪಕ್ಕದಲ್ಲಿದ್ದ ಕಬ್ಬಿಣದ ಸುತ್ತಿಗೆ ತೆಗೆದು ಆನಂದನ ತಲೆಗೆ ಮತ್ತು ದೊಣ್ಣೆಯಿಂದ ಕೈಕಾಲುಗಳಿಗೆ ಹೊಡೆದು ಕೊಲೆ ಮಾಡಿದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನಂತರ ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಲೈನ್ಮನೆಯ ಮುಂಭಾಗದಲ್ಲಿ ನಿರ್ಮಿಸುತ್ತಿದ್ದ ಫೌಂಡೇಷನ್ ನಲ್ಲಿ ಮಲಗಿಸಿದ ವಿಚಾರ ನನಗೆ ತಿಳಿಯಿತು  ಎಂದರೆ ಸರಿಯಲ್ಲ. ಈ ಎಲ್ಲ ವಿಚಾರವಾಗಿ ಈಗ ನನಗೆಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯವಿದ್ದು ಆತ ಮೃತ ಆನಂದನನ್ನು ಕೊಲೆ ಮಾಡಿದ ವಿಚಾರ ತಿಳಿದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**